order. One of these persons was kept in the Frazer Town Police Station for the night. Two persons were kept in the Cleveland Town Police Station and the remaining persons were kept in the Cubbonpet Police Station. None of the arrested persons was kept in the Magadi Road Police Station. It is not true that these persons were ill-treated as alleged. They were properly looked after. All the 10 persons were produced before the Additional First Class Magistrate, Bangalore on 20th July 1967 and were released on bail. None of them made any complaint of ill-treatment before the court.

Member's Representation.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ಈ ಸಭೆಯ ಮಾನ್ಯ ಸದಸ್ಯರಲ್ಲಿ ಹಾಗೂ ಈ ನಮ್ಮ ರಾಜ್ಯದ ಜನತೆಯಲ್ಲಿ ಕಳವಳವನ್ನು ಹಾಗೂ ಗಾಬರಿಯನ್ನು ಉಂಟುಮಾಡಿರತಕ್ಕ ಹಾಗೂ ನಮ್ಮ ರಾಜ್ಯ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುವುದಕ್ಕೆ ಪ್ರಯತ್ನ ಪಟ್ಟಿರುವ ಕೇಂದ್ರ ಸರ್ಕಾರದ ನೀರಾವರಿ ಸಚಿವರ ಹೇಳಿಕೆಯನ್ನು ಸರ್ಕಾರದ ಗಮನಕ್ಕೆ ತರಲಿಚ್ಚಿಸುತ್ತೇನೆ. ಮೊನ್ನೆ ನಿಲುವಳಿ ಸೂಚನೆಮೇಲೆ ಮಾತನಾಡತಕ್ಕ ಕಾಲದಲ್ಲಿ ಆಂಧ್ರದವರು ಮತ್ತು ಕೇಂದ್ರದವರು ಒಟ್ಟಾಗಿ ಕೃಷ್ಣಾ ನದಿಯ ನೀರಿನ ವಿಷಯದಲ್ಲಿ ಮೈಸೂರಿನ ಹಕ್ಕಿಗೆ ಧಕ್ಕೆ ಬರುತ್ತಾ ಇದೆ ಎಂಬ ಆಪಾದನೆಯನ್ನು ಮಾಡಿದ ಕಾಲದಲ್ಲಿ ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಯವರು ಅದನ್ನು ನಿರಾಕರಿಸಿ ಕೇಂದ್ರ ಸರ್ಕಾರದವರು ಆಂಧ್ರ ಸರ್ಕಾರದವರಿಗೆ ನಾಗಾರ್ಜುನ ಸಾಗರದ ಎರಡನೆ ಹಂತವನ್ನು ಪ್ರಾರಂಭ ಮಾಡಲಿಕ್ಕೆ ಆಗಲಿ, ಫಸ್ಟ್‌ಸ್ಟೇಜ್‌ನ ಕ್ರೆಸ್ಟ್ ಗೇಟ್ ಹಾಕುವುದಕ್ಕೆ ಆಗಲಿ ಅವಕಾಶ ಕೊಡುವುದಿಲ್ಲ ಎಂಬ ಭರವಸೆಯನ್ನು ಈ ಸಭೆಗೆ ಕೊಟ್ಟರು. ಇಲ್ಲಿ ಮಾನ್ಯ ಸಚಿವರು ಹೇಳಿಕೆ ಕೊಡತಕ್ಕ ಸಮಯದಲ್ಲಿಯೇ ಡೆಲ್ಲಿಯಲ್ಲಿ ರಾಜ್ಯ ಸಭೆಯಲ್ಲಿ ಕೇಂದ್ರ ಸರ್ಕಾರದ ನೀರಾವರಿ ಸಚಿವರಾದ ಶ್ರೀ ಕೆ. ಎಲ್. ರಾವ್ ಅವರು ಒಂದು ಹೇಳಿಕೆಯನ್ನು ಕೊಟ್ಟರು, ಅದು ರಿಪೋರ್ಟ್ ಆಗಿರುವ ಪ್ರಕಾರ ಅದನ್ನು ಓದುತ್ತೇನೆ.

In 1956 when the Nagarjunasagar project was sanctioned no projects upstream had been planned. Meanwhile, a number of them both in Mysore and Maharashtra have been sanctioned. Because of this, a greater storage capacity was needed to ensur the utilisation of even 264 TMCFT allotted to Andhra. According to Dr. Rao, the need for Andhra to instal the crest gates was unquestionable. ಎಂಬ ಮಾತು ಹೇಳಿದ್ದಾರೆ.

ಐವತ್ತಾರನೇ ಇಸವಿಯ ಮಾತು ಹೇಳಿದರು. ಆದರೆ 60ನೇ ಇಸವಿಯ ಕೇಂದ್ರದವರ 56ನೇ ಇಸವಿಯ ಮಟ್ಟ 575 ಅಂತ ಅನ್ನುವುದು ಸರಿಯಲ್ಲ. ಅಫ್ ಸ್ಟ್ರೀಂನಲ್ಲಿ ಅಂತಹ ಪ್ರಾಜೆಕ್ಟ್ ಆಗಬೇಕೆಂದು ಸಿ. ಡಬ್ಲ್ಯೂ. ಪಿ. ಸಿ. ಸದಸ್ಯರೂ, ಕೇಂದ್ರದ ಮಂತ್ರಿಗಳಾಗಿದ್ದವರು, ಹಾಗೂ ಕೋಪ್ ಕಮಿಟಿಯವರು 567 ಎಫ್. ಆರ್. ಎಲ್. ಲೆವಲ್ ಅಂತ ಹೇಳಿ ತೀರ್ಮಾನ ಮಾಡಿದರು. ಅಫ್ ಸ್ಟ್ರೀಂನಲ್ಲಿ ಆಗತಕ್ಕ ಪ್ರಾಜೆಕ್ಟ್‌ಗಳು ಗಮನದಲ್ಲಿ ಇಲ್ಲ ಅನ್ನುವುದು ಸರಿಯಾದ ಮಾತಲ್ಲ, ಹಾಗೂ ಇನ್ನೊಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ :

He says "the need for Andhra to instal crestgates is 'unquestionable'. ಎಂಬ ಮಾತನ್ನು ಶ್ರೀ ಕೆ. ಎಲ್. ರಾವ್ ಅವರು ಅಪ್ಪಣೆ ಕೊಡಿಸಿದ್ದಾರೆ. ಕೇಂದ್ರ ಸರ್ಕಾರದ ನೀರಾವರಿ ಸಚಿವರ ಹಿಂದಿನ ಮಾತು ಹಾಗೂ ಕೇಂದ್ರದವರ ನಡವಳಿಕೆ ಭಯವನ್ನು ಹುಟ್ಟಿಸತಕ್ಕ ರೀತಿಯಲ್ಲಿ ಇವೆ. ಅವರ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ನಾವು ನೋಡಿದ್ದೇ ಆದರೆ, ಅವರ ಹೇಳಿಕೆಗೂ ಮೈಸೂರಿನ ಮಂತ್ರಿಗಳು ಹೇಳಿರುವ ಮಾತಿಗೂ ಒಂದಕ್ಕೊಂದಕ್ಕೆ ಹೋಲಿಸಿ ನೋಡಿದರೆ ಕಡ್ಡಾಯವಾಗಿ ಕೃಷ್ಣಾ ನದಿ ನೀರು ನಮ್ಮ ಮೈಸೂರು ರಾಜ್ಯದ ಹಿತಾಸಕ್ತಿಗೆ ಚ್ಯುತಿ ಬರುತ್ತದೆ, ಹಕ್ಕಿಗೆ ಧಕ್ಕೆ ಬರುತ್ತದೆ ಎಂದು ಅನಿಸುತ್ತಾ ಇದೆ. ಮಂತ್ರಿ ವರ್ಯರು ಮೊನ್ನೆ ದಿವಸ ನಮಗೆ ಕೊಟ್ಟಂಥ ಭರವಸೆಯನ್ನು ಕೇಂದ್ರದ ನೀರಾವರಿ ಸಚಿವರ

(ಶ್ರೀ ಎಚ್. ಎನ್. ನಂಜೇಗೌಡ)

ವಿಷಯದಲ್ಲಿ ಯಾವ ಗೌರವ ಇಟ್ಟುಕೊಂಡು ಭರವಸೆ ಕೊಟ್ಟರೋ ಹಾಗೆ ಅವರು ಹೇಳಿಕೆ ಕೊಟ್ಟಿಲ್ಲ, ಇದು ಕಳವಳವನ್ನು ಉಂಟುಮಾಡಿದೆ. ಈ ವಿಷಯದಲ್ಲಿ ನಮ್ಮ ಸರ್ಕಾರದ ಪ್ರತಿಕ್ರಿಯೆ ಏನು ಎಂಬುದನ್ನು ಈ ಸಭೆಗೆ, ಈ ನಮ್ಮ ರಾಜ್ಯಕ್ಕೆ ತಿಳಿಸಿದರೆ ಒಳ್ಳೆಯದು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ನಿನ್ನೆ ಬೆಳಿಗ್ಗೆ ಪೇಪರ್‌ನಲ್ಲಿ ನಾಗಾರ್ಜುನ ಸಾಗರದ ಸೆಕೆಂಡ್ ಸ್ಪೇಜ್‌ದ ಬಗ್ಗೆ ಬಂದದ್ದನ್ನು ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ನಾನು ಈ ಸಭೆಗೆ ಉತ್ತರ ಕೊಡುತ್ತಾ ಕೇಂದ್ರ ಸರ್ಕಾರದವರು ನಾಗಾರ್ಜುನ ಸಾಗರ ಸೆಕೆಂಡ್ ಸ್ಪೇಜ್‌ಗೆ ಅನುಮತಿ ಕೊಡುವ ಹಾಗೆ ಇಲ್ಲ ಎಂಬ ಭರವಸೆ ಕೊಟ್ಟಿದ್ದಾರೆ ಮತ್ತು ನಾಗಾರ್ಜುನ ಸಾಗರ ಕ್ರೆಸ್ಟ್‌ಗೇಟ್ ಹಾಕುವುದಕ್ಕೂ ಕೂಡ ಅನುಮತಿ ಕೊಡುವ ಹಾಗಿಲ್ಲ ಎಂಬ ಭರವಸೆಯನ್ನು ಕೊಟ್ಟಿದ್ದಾರೆ ಎಂದು ತಿಳಿಸಿದೆ ಎಂದು ಅವರು ಹೇಳಿದರು. ನಾನು ಏನು ಹೇಳಿದ್ದೇನೆ ಎನ್ನುವಂತಹುದು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಸ್ಪಷ್ಟವಾಗುವಂತಹ ರೀತಿಯಲ್ಲಿ ಹೇಳಿದ್ದೇನೆ. ಕೇಂದ್ರ ಸರಕಾರದವರು ನಮಗೆ ಪತ್ರದ ಮೂಲಕ, ಮತ್ತು ಟೆಲಿಗ್ರಾಂ ಮೂಲಕ ಏನು ತಿಳಿಸಿದ್ದಾರೆ ಎಂಬುದನ್ನು ಟೆಲಿಗ್ರಾಂ ತಂದು ಈ ಸಭೆಯಲ್ಲಿ ಓದಿದ್ದೇನೆ. ಅವರು ನಮಗೆ ಹೇಳಿದ್ದು ನಾಗಾರ್ಜುನ ಸಾಗರದ ಎರಡನೆ ಹಂತದ ಬಗ್ಗೆ, 1963ರಲ್ಲಿ ಆಗಿದ್ದಂತಹ ಮಂತ್ರಿಗಳು ಏನು ಒಂದು ಸ್ಪೇಟ್‌ಮೆಂಟ್ ಮಾಡಿದ್ದಾರೆ ಅದರ ಪ್ರಕಾರ ಸೆಕೆಂಡ್ ಸ್ಪೇಜ್‌ಗೆ ಅನುಮತಿ ಕೊಡುವ ಹಾಗೆ ಇಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಅದನು ತಮ್ಮ ಮುಂದೆ ಹೇಳಿದ್ದೇನೆ. ಕ್ರೆಸ್ಟ್ ಗೇಟ್ ಹಾಕುವುದಕ್ಕೂ ನಾವು ಅನುಮತಿ ಕೊಡುವ ಹಾಗೆ ಇಲ್ಲ ಎಂಬ ಭರವಸೆಯನ್ನು ಕೊಟ್ಟಿದ್ದಾರೆ ಎಂದು ಈ ಮಾನ್ಯ ಸಭೆಗೆ ಅಂದು ನಾನು ಹೇಳಲಿಲ್ಲ. ಅದರ ಪ್ರಶ್ನೆ ಏನೆಂದರೆ ಕ್ರೆಸ್ಟ್-ಗೇಟ್‌ನ ಪ್ರಶ್ನೆ ಫಸ್ಟ್ ಸ್ಪೇಜ್ ಆದಮೇಲೆ ಸೆಕೆಂಡ್ ಸ್ಪೇಜ್‌ನಲ್ಲಿ ಬರುತ್ತದೆ ಎಂಬ ಕಾಂಜೊ ವರ್ಸಿ ಇದೆ. ನಮ್ಮ ಲೆಕ್ಕದ ಪ್ರಕಾರ, ಕ್ರೆಸ್ಟ್ ಗೇಟ್ ಹಾಕುವುದು ಮೊದಲನೆಯ ಸ್ಟೇಜ್‌ನಲ್ಲೇ ಬರುವ ಹಾಗಿಲ್ಲ ಸೆಕೆಂಡ್ ಸ್ಟೇಜ್‌ನಲ್ಲಿ ಎಂದು ಹೇಳುತ್ತಾ ಇದ್ದೇವೆ. ಮೊದಲನೆಯ ಸ್ಟೇಜ್‌ನಲ್ಲೇ ಬರುತ್ತದೆ ಎಂದು ಆಂಧ್ರದವರು ವಾದ ಮಾಡುತ್ತಾ ಇರಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ಫಸ್ಟ್ ಸ್ಟೇಜ್ ಯಾವುದು, ಸೆಕೆಂಡ್ ಸ್ಟೇಜ್ ಯಾವುದು ಅಂತ ರಿಪೋರ್ಟ್‌ನಲ್ಲಿ ಪ್ರಸ್ತಾಪ ಮಾಲಿದ್ದಾರೆ. ಸೆಕೆಂಡ್ ಸ್ಟೇಜ್‌ನಲ್ಲೇ ಬರುತ್ತದೆ ಅನ್ನುವ ಬಗ್ಗೆ ಯಾರು ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ, ಫಸ್ಟ್‌ಸ್ಟೇಜ್‌ನಲ್ಲಿ ಕ್ರೆಸ್ಟ್ ಗೇಟು ಬರುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಒಪ್ಪುತ್ತೇನೆ. ಅವರು ಪೇಪರ್‌ನಲ್ಲಿ ಬಂದಿರತಕ್ಕ ಒಂದು ವರದಿಯನ್ನು ಓದಿ ಡಾಕ್ಟರ್ ಕೆ. ಎಲ್. ರಾವ್ ಅವರು ಹೇಳಿದ್ದು ಎಂದು ಹೇಳಿದರು. ಒಂದು ಪೇಪರ್‌ನಲ್ಲಿ ಒಂದು ರೀತಿಯಲ್ಲಿ ಬಂದಿದ್ದರೆ ಉಳಿಕೆ ಪೇಪರ್‌ನಲ್ಲಿ ಅದೇ ರೀತಿಯಲ್ಲಿ ಹೇಳಿದ್ದಾರೆಯೇ ಇಲ್ಲವೇ ಅಂತ ಪರಿಶೀಲನೆ ಮಾಡಬೇಕಾಗುತ್ತದೆ. ಅದೂ ಅಲ್ಲದೆ ಇದು ಬಹಳ ಸೂಕ್ಷ್ಮವಾದ ಪ್ರಶ್ನೆಯಾಗಿದೆ. ಅವರು ಹೇಳಿದ್ದು ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿ ಅದು ಸರಿ ಅಂತ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಜಿ. ಬಣಕಾರ್.—ಅವರು ರಾಜ್ಯ ಸಭೆಯಲ್ಲಿ ಹೇಳಿದ ಮಾತು ಪ್ರತಿಕೆಯಲ್ಲಿ ಬಂದಿದೆ, ಅದು ಪತ್ರಿಕೆಯ ಸಂಪಾದಕರು ಬರೆದಿದ್ದಲ್ಲ.

ಶ್ರೀ ವೀರೇಂದ್ರ ಪಾಟೀಲ್.—ರಾಜ್ಯಸಭೆಯಲ್ಲಿ ಹೇಳಿದ ಮಾತು ಪತ್ರಿಕೆಯಲ್ಲಿ ಬಂದಿದೆ. ಒಂದು ಪತ್ರಿಕೆಯಲ್ಲಿ ಬಂದಂತೆಯೇ ಪ್ರತಿಯೊಂದು ಪತ್ರಿಕೆಯಲ್ಲೂ ಬಂದಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

ಇನೊಂದು ವಿಷಯ ಏನೆಂದರೆ ಬಹುಶಃ ಅವರ ಲೆಕ್ಕದಿಂದ ಒಂದು ವೇಳೆ ಆ ರೀತಿಯಿಂದ ಹೇಳಿದ್ದರೆ ಫಸ್ಟ್ ಸ್ಟೇಜ್‌ನಲ್ಲೇ ಕ್ರೆಸ್ಟ್ ಗೇಟ್ ಹಾಕುವಂತಹುದು ಬರುತ್ತದೆ ಎಂದು ಅದರಿಂದ ಸ್ಪಷ್ಟವಾಗುತ್ತದೆ. ಅದನ್ನು ನಾವು ಪ್ರೊಜೆಸ್ಟ್ ಮಾಡುತ್ತಾ ಇದ್ದೇವೆ. ಅಲ್ಲಗಳೆಯುತ್ತಾ ಇದ್ದೇವೆ. ಮೊದಲನೆ ಹಂತದಲ್ಲಿ ಇದೆ ಅಂತ ಇಂಟರ್‌ಪ್ರಿಟ್ ಮಾಡಿ ಹಾಕಬಹುದು ಎಂದು ಭಯ ಬಂದಿತ್ತು, ಅದಕ್ಕಾಗಿಯೇ ಕ್ರಮ ತೆಗೆದುಕೊಂಡಿದ್ದೇವೆ. ನೋಟೀಸ್ ಕೊಟ್ಟಿದ್ದೇವೆ. ಇನ್ನು ಕೆಲವು ದಿವಸಗಳ ಮೇಲೆ ನಾವು ಹೇಳಿದ ಪ್ರಕಾರ ಕೇಂದ್ರದವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವೇಳೆ ಅವರು ಕ್ರಮ ತೆಗೆದುಕೊಳ್ಳದಿದ್ದರೆ ಮತ್ತೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ, ಸುಮ್ಮನೆ ಕುಳಿತಿಲ್ಲ.

2-30 P.M.

ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡಿ ನಾವು ಎಲ್ಲೆಲ್ಲಿ ಏನೇನು ಕೆಲಸಗಳನ್ನು ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದೇವೆ. ಹಾಗು ಮುಂದಕ್ಕೇನು ಮಾಡಬೇಕೆಂಬುದನ್ನೂ ಸಹಾ ನಾವು ಪರಿಶೀಲನೆ ಮಾಡುತ್ತಿದ್ದೇವೆ. ನಾವೇನು ಸುಮ್ಮನೆ ಕುಳಿತಿಲ್ಲ. ಈ ಎಲ್ಲಾ ವಿಚಾರಗಳನ್ನೂ ನಾನು ಸಭೆಗೆ ಹಂಪೆಯೇ ತಿಳಿಸಿದ್ದೇನೆ. ಅಷ್ಟೆಲ್ಲವನ್ನೂ ಹೇಳಿದ್ದಾಗ ಈ ದಿವಸ ಅಲ್ಲಿ ಆಂಧ್ರದವರು ಹಾಗೆ ಹೇಳುತ್ತಿದ್ದಾರೆಂದರೆ ಅದಕ್ಕೆ ನಾನೇನು ಹೇಳಲಿ? ಅಲ್ಲಿ ಅವರು ಅರೀತಿಯಾಗಿ ಹೇಳಿದ್ದರೆ ನಾವು ಇಲ್ಲಿ ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ. ನಂವೇನೂ ಸುಮ್ಮನಿರುವುದಿಲ್ಲ.

ಶ್ರೀ ಎಚ್. ಎಲ್. ನಂಜೇಗೌಡ.—ನಾನು ಆ ಎಫ್.ಆರ್.ಎಲ್. ಲೆವಲ್ಲನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ—ಶ್ರೀ ಕೆ.ಎಲ್. ರಾವ್ ಅವರು ಆ ಅಪ್‌ಸ್ಟ್ರೀಂ ವಿಚಾರವಾಗಿ ಏನು ಹೇಳಿದ್ದಾರೆ ಅದು ಸರಿಯಲ್ಲ. ಹಿಂದೆ ಆ ನಾಗಾರ್ಜುನ ಸಾಗರದ ಎಫ್.ಆರ್.ಎಲ್. ಅನ್ನು 525ಕ್ಕೆ ಫಿಕ್ಸ್ ಮಾಡಿದ್ದಾಗ ಆ ತೀರ್ಮಾನದಲ್ಲಿ ಅಪ್ ಸ್ಟ್ರೀಂಗಳ ವಿಚಾರ ಕಾಂಚಿಂಪ್ಲೇಟಾಗಿರಲಿಲ್ಲ. ಹಾಗಿದ್ದರೂ ಶ್ರೀ ಕೆ. ಎಲ್. ರಾವ್ ಅವರು ತಮ್ಮ ಒಂದು ಇನ್‌ಫ್ಲುಯೆನ್ಸಿನಿಂದ ಎಫ್.ಆರ್.ಎಲ್. 525 ಇದ್ದುದನ್ನು ಸಿ.ಡಬ್ಲು.ಪಿ.ಸಿ. ಅವರ ಮೂಲಕ 540ಕ್ಕೆ ಏರಿಸಿದ್ದಾರೆ. ಅದಾದನಂತರ ಪುನಹ ಅವರು ಅಡ್‌ಹೋಕ್ ಕಮಿಟಿಯವರ ಮೇಲೆ ತಮ್ಮ ಪ್ರಭಾವವನ್ನು ಬೀರಿ ಅದನ್ನು 546ಕ್ಕೆ ಹೆಚ್ಚಿಸುವಂತೆ ಮಾಡಿದ್ದಾರೆ. ಅಲ್ಲಿಗೂ ಅವರು ಅದನ್ನು ಕ್ಯೆಬಿಡದೆ ಈಗ ಆ ಎಫ್.ಆರ್.ಎಲ್.ಲೆವಲ್ಲನ್ನು 590 ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈ ಎಫ್.ಆರ್.ಎಲ್.ಲೆವೆಲ್ ಮೊದಲೇ ಇಷ್ಟಿತ್ತು ಎಂದು ಹೇಳುವುದಕ್ಕೆ ಶ್ರೀ ಕೆ.ಎಲ್. ರಾವ್ ಅವರು ಈಗ ಹೊರಟಿದ್ದಾರೆ. ಅವರ ಹೇಳಿಕೆಯಲ್ಲಿ ಇರತಕ್ಕ ಸತ್ಯಾಂಶವನ್ನು ಮುಚ್ಚಿಡುವುದಕ್ಕೆ, ಹುದುಗಿಸಿಡುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ. ಅವರೂ ಆಂಧ್ರದವರೇ. ಅವರಿಗೆ ಆ ಆಂಧ್ರದವರ ಬಗ್ಗೆ ಹೆಚ್ಚಿನ ಅಭಿಮಾನ ಏದೆ. ಅವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದುಕೊಂಡು, ಆ ಆಂಧ್ರದವರ ಬೆನ್ನು ಭುಜಗಳನ್ನು ಚಪ್ಪರಿಸುವಂತೆ ಮಾತುಗಳನ್ನಾಡುತ್ತಿದ್ದಾರೆ. ಅದುದರಿಂದ ನಮ್ಮ ಸರ್ಕಾರದ ಪ್ರತಿಕ್ರಿಯೆಯೇನು, ಆ ನಾಗಾರ್ಜುನಸಾಗರದ ನೀರಿನ ಮಟ್ಟ ಹೆಚ್ಚದಂತೆ ತಡೆಗಟ್ಟಲು ಏನು ಕ್ರಮಗಳನ್ನು ಕ್ಯೆಗೊಂಡಿದ್ದಾರೆಂಬುದನ್ನು ತಿಳಿಯುವತನಕ ಈ ಸಭೆಯ ಸದಸ್ಯರಿಗೆ ಬಹಳ ದುಃಖ ಹಾಗೂ ಬಹಳ ಕಳವಳವುಂಟಾಗಿದೆ. ಇದಕ್ಕೆ ತಾವು ತಕ್ಕ ಪರಿಹಾರಕ್ರಮವನ್ನು ಕ್ಯೆಗೊಂಡಿದ್ದೀರಿ?

RESOLUTION *Re*: A NOTIFICATION TO BE ISSUED UNDER THE COTTON TRANSPORT ACT, 1923—

APPROVAL

Sri S. NIJALINGAPPA (Chief Minister).—Sir, I move :

"That this House hereby approves the Notifications proposed to be issued by the State Government under section 3 of the Cotton Transport Act, 1923 (Central Act 3 of 1923), the drafts of which have been laid before this House on the 16th March, 1967."

Mr. SPEAKER.—Resolution moved :

"That this House hereby approves the Notifications proposed to be issued by the State Government under section 3 of the Cotton Transport Act, 1923 (Central Act 3 of 1923), the drafts of which have been laid before this House on the 16th March, 1967."